# ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸ್ತ್ರೀವಾದಿ ಸಂವೇದನೆಗಳು

**ಸೌಮ್ಯ ಸಿ.**
ಸಹಾಯಕ ಪ್ರಾಧ್ಯಾಪಕರು, ಶ್ರೀ ಕೆ. ಎಮ್. ಮಾಮನಿ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ, ಸವದತ್ತಿ.

DOI: https://doi.org/10.5281/zenodo.18700247

## ABSTRACT:

"ನಿನಗೆ ಬೇರೆ ಹೆಸರು ಬೇಕೆ ಸ್ತ್ರೀ ಅಂದರೆ ಅಷ್ಟೇ ಸಾಕೆ" ಎನ್ನುವ ಜಿ. ಎಸ್. ಶಿವರುದ್ರಪ್ಪನವರ ಪದ್ಯವನ್ನು ಗಮನಿಸಿದರೆ ಒಂದು ಕುಟುಂಬದಲ್ಲಿ ಸ್ತ್ರೀಯ ಅವಶ್ಯಕತೆ ಏನು? ಸಮಾಜದಲ್ಲಿ ಸ್ತ್ರೀಯ ಪಾತ್ರವೇನು? ಎನ್ನುವುದನ್ನು ತಿಳಿಯಬಹುದಾಗಿದೆ. ತುಂಬಾ ಹಿಂದೆ ಉತ್ತುಂಗದಲ್ಲಿದ್ದ ಸ್ತ್ರೀಯರ ಸ್ಥಾನಮಾನಗಳು ಬರು ಬರುತ್ತಾ ತುಂಬಾ ಶೋಚನೀಯ ಸ್ಥಿತಿಗೆ ತಲುಪಿದವು. ಬಾಲ್ಯ ವಿವಾಹ, ವರದಕ್ಷಣೆ, ಸತಿ ಪದ್ಧತಿ ಮುಂತಾದ ಸಮಸ್ಯೆಗಳಿಂದ ಸ್ತ್ರೀಯರು ಬಳಲಿ ನೊಂದಿದ್ದರು. ಹಲವಾರು ಸಮಾಜ ಸುಧಾರಕರ ಹೋರಾಟದಿಂದ ಸ್ತ್ರೀಯರು ಇಂದು ಸ್ವತಂತ್ರವಾಗಿ ಸಮಾನತೆಯಿಂದ ನೆಮ್ಮದಿ, ಗೌರವ, ಸಂತೋಷದಿಂದ ಬದುಕುತ್ತಿರುವುದನ್ನು ಕಾಣಬಹುದಾಗಿದೆ. ಸ್ತ್ರೀಯರು ಸಮಾಜದಲ್ಲಿ ಎಲ್ಲಾ ಕ್ಷೇತ್ರದಲ್ಲೂ ತಮ್ಮದೇ ಆದ ರೀತಿಯಲ್ಲಿ ಸಾಧನೆಗಳನ್ನು ಮಾಡಿದ್ದಾರೆ. ತಮ್ಮ ಛಾಪನ್ನು ಮೂಡಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಮಹಿಳೆಯರ ಪಾತ್ರವನ್ನು ಗಮನಿಸಿದರೆ ವೇದಗಳ ಕಾಲದಿಂದ ಹಿಡಿದು ಜನಪದ ಸಾಹಿತ್ಯ, ಹಳಗನ್ನಡ ಸಾಹಿತ್ಯ, ವಚನ ಸಾಹಿತ್ಯ, ಕೀರ್ತನ ಸಾಹಿತ್ಯ ಹೀಗೆ ಹಂತ ಹಂತವಾಗಿ ಬೆಳೆದು ಆಧುನಿಕ ಸಾಹಿತ್ಯದವರೆಗೂ ಸ್ತ್ರೀಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವುದನ್ನು ಕಾಣಬಹುದಾಗಿದೆ. ಕನ್ನಡ ಸಾಹಿತ್ಯದಲ್ಲಿ ಮಹಿಳೆಯರ ಭಾವನೆಗಳು, ಮಹಿಳೆಯರ ಬದುಕಿನ ಸಂಕಷ್ಟಗಳು, ನೋವು ನಲಿವು, ಸುಖ, ಸಂತೋಷ, ಸಮಸ್ಯೆ, ಸವಾಲು ಎಲ್ಲವನ್ನೂ ಅಭಿವ್ಯಕ್ತಪಡಿಸುವ ಸ್ತ್ರೀ ಸಂವೇದನೆಯನ್ನು ಕುರಿತು ಹಲವಾರು ಕೃತಿಗಳು ಹೊರಬಂದಿರುವುದನ್ನು ನಾವು ಗಮನಿಸಬಹುದು. ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಎನ್ನುವುದು ವಿಶಾಲವಾದ ವ್ಯಾಪ್ತಿಯನ್ನು ಹೊಂದಿದ್ದು, ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಸ್ತ್ರೀ ಸಂವೇದನೆ ಹೇಗೆ ಅಭಿವ್ಯಕ್ತಗೊಂಡಿದೆ ಎಂದು ತಿಳಿಯುವ ಒಂದು ಪ್ರಯತ್ನದ ಫಲವಾಗಿ ಈ ಲೇಖನ ಬರೆಯಲಾಗಿದೆ. ಮಹಿಳೆಯರ ಬದುಕಿನ ಒಳನೋಟವನ್ನು ಅವರದ್ದೇ ದೃಷ್ಟಿಕೋನದಿಂದ ನೋಡುವ ಅವರ ಭಾವನೆಗಳನ್ನು ಸಮಾನ ಮನಸ್ಸಿನಿಂದ ಅರಿತು ವ್ಯಕ್ತಪಡಿಸುವ ಬರಹವೇ ಮಹಿಳಾ ಸಂವೇದನೆಯಾಗಿದೆ. ಈ ರೀತಿ ಸ್ತ್ರೀಯರ ಎಲ್ಲ ರೀತಿಯ ಸಮಸ್ಯೆ, ಶೋಷಣೆ, ನೋವು, ತೊಳಲಾಟಗಳನ್ನು ತಮ್ಮ ಬರಹಗಳಲ್ಲಿ ವ್ಯಕ್ತಪಡಿಸುವ ಮೂಲಕ ಸಮಾಜದಲ್ಲಿ ಮಹಿಳಾಪರ ಕ್ರಾಂತಿಯನ್ನು ಮೂಡಿಸಿದ ಅದೆಷ್ಟೋ ಮಹಿಳಾ ಲೇಖಕಿಯರ ಪ್ರಯತ್ನ ಅಭಿನಂದನಾರ್ಹವಾಗಿದೆ.

## KEYWORDS:

ಮಹಿಳೆ, ಸಂವೇದನೆ, ಶೋಷಣೆ, ಕನ್ನಡ ಸಾಹಿತ್ಯ, ಬದಲಾವಣೆ, ಅಭಿವ್ಯಕ್ತಿ.

**ಪೀಠಿಕೆ:** ಸೃಷ್ಟಿಯ ಮೂಲ ಹೆಣ್ಣು ಈ ಜಗದ ಕಣ್ಣು ಹೆಣ್ಣು ಎನ್ನುವ ಮಾತಿನಂತೆ ಹೆಣ್ಣು ಸಾಹಿತ್ಯದ ಕಣ್ಣು ಎನ್ನುವ ಮಾತು ಕೂಡಾ ಅಷ್ಟೇ ಸತ್ಯವಾದುದು. ಏಕೆಂದರೆ, ತುಂಬಾ ಹಿಂದಿನ ಕಾಲದಿಂದಲೂ ಕನ್ನಡ ಸಾಹಿತ್ಯದಲ್ಲಿ ಹೆಣ್ಣು ಒಂದಿಲ್ಲ ಒಂದು ರೀತಿಯಲ್ಲಿ ತನ್ನ ಪಾತ್ರವನ್ನು ನಿಭಾಯಿಸಿದ್ದಾಳೆ. ಹಿಂದೆ ಸಾಹಿತ್ಯದ ಕರ್ತೃ ಆಗಿ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಾ ಬಂದರೂ ಸಾಹಿತ್ಯದ ವಸ್ತು ಆಗಿ ಮಾತ್ರ ಸದಾ ಕಾಣಿಸಿಕೊಳ್ಳುತ್ತಾಳೆ. ಹೆಣ್ಣಿಲ್ಲದ ಸಾಹಿತ್ಯ ಊಹಿಸಿಕೊಳ್ಳುವುದೂ ಕಷ್ಟವಾಗಿದೆ. ಪ್ರಾಚೀನ ಸಾಹಿತ್ಯದಿಂದ ಇಂದಿನ ಆಧುನಿಕ, ಆಧುನಿಕೋತ್ತರ ಸಾಹಿತ್ಯದಲ್ಲಿ ಮಹಿಳೆಯರನ್ನು ನಾವು ನೋಡಬಹುದಾಗಿದೆ. ಜನಪದ ಸಾಹಿತ್ಯ ಓದದೇ ಇದ್ದರೂ ಮಹಿಳೆಯರು ತಮ್ಮ ಮನಸ್ಸಿನ ಭಾವನೆಗಳನ್ನು, ಅನುಭವಗಳನ್ನು ಪದ್ಯದ ರೂಪದಲ್ಲಿ ಕಟ್ಟಿ ಹಾಡಿರುವುದನ್ನು ಗಮನಿಸಬಹುದು. ಚಂಪೂ ಸಾಹಿತ್ಯದಲ್ಲಿ ಅತ್ತಿಮಬ್ಬೆ ದಾನ ಚಿಂತಾಮಣಿ ಎನಿಸಿದ್ದಳು, ವಚನ ಸಾಹಿತ್ಯದಲ್ಲಿ 12 ನೇ ಶತಮಾನದಲ್ಲಿ ಮಹಿಳಾ ಹೋರಾಟಗಾರ್ತಿಯಾಗಿ ನಮ್ಮ ಅಕ್ಕಮಹಾದೇವಿಯವರು ಕಾಣಿಸಿಕೊಂಡಿದ್ದಾರೆ. ಹೀಗೆಯೇ ಆಯಾ ಕಾಲದ ಸಾಹಿತ್ಯದ ರಚನೆಯಲ್ಲಿ ಹೆಣ್ಣು ಎಂದೂ ಹಿಂದೆ ಬೀಳದೇ ತನ್ನ ಕೊಡುಗೆಯನ್ನು ಕನ್ನಡ ಸಾಹಿತ್ಯಕ್ಕೆ ನೀಡಿರುವುದನ್ನು ಕಾಣಬಹುದಾಗಿದೆ. ಇಂದಿನ ಕಾಲದ ಕಥಾ ವಸ್ತುಗಳಲ್ಲಿ ಸೀತೆ, ಸಾವಿತ್ರಿ, ದ್ರೌಪದಿ, ಅಹಲ್ಯ ಮುಂತಾದ ಸ್ತ್ರೀ ಪಾತ್ರಗಳನ್ನು ಸಂಪ್ರದಾಯ, ನೈತಿಕತೆಯ ಮೂಲಗಳಾಗಿ ಬಳಸಿರುವುದನ್ನು ನಾವು ಕಾಣುತ್ತೇವೆ. ಆಧುನಿಕ ಕಾಲ ಘಟ್ಟದಲ್ಲಿ ಸ್ತ್ರೀಯು ಪ್ರೀತಿ, ಪ್ರೇಮ, ತ್ಯಾಗ, ಸಹನೆ, ಮಮತೆ, ಆದರ್ಶ ಮತ್ತು ವೇಶ್ಯೆ, ಭಿಕ್ಷುಕಿ, ದಲಿತೆ, ಹೀಗೆ ಹಲವಾರು ರೀತಿಯಲ್ಲಿ ಅವಳನ್ನು ಚಿತ್ರಿಸಿದ್ದು ಕಾಣಬಹುದಾಗಿದೆ. ಆಧುನಿಕೋತ್ತರ ಸಾಹಿತ್ಯ ಎಂದಾಗ ಬದಲಾವಣೆ ಜಗದ ನಿಯಮ ಎನ್ನುವಂತೆ ಇಂದು ಸಮಾಜದಲ್ಲಿ ಎಲ್ಲಾ ಕ್ಷೇತ್ರದಲ್ಲಿಯೂ ಬದಲಾವಣೆ ಹೊಂದಿದೆ. ಹೆಣ್ಣಿನ ಸ್ಥಾನ ಕೇವಲ ಅಡುಗೆ ಮನೆ ಎಂಬ ಮಾತು ಸುಳ್ಳಾಗಿ, ಪುರುಷರ ಎದುರು ಮಾತನಾಡುವುದೇ ಅಪರಾಧ ಎನ್ನುವ ಕಾಲಘಟ್ಟದಿಂದ ಹೆಣ್ಣು ಗಂಡು ಸಮಾನತೆಯಿಂದ ನಿರ್ಧಾರ ತೆಗೆದುಕೊಳ್ಳಬಹುದಾದ ಇಂದಿನ ಪ್ರಸ್ತುತ ಸಮಾಜದಲ್ಲಿ ಸಾಹಿತ್ಯದ ಅಭಿವ್ಯಕ್ತಿಯಲ್ಲೂ ಬದಲಾವಣೆ ಕಾಣಬಹುದಾಗಿದೆ.

**ಮಹಿಳಾ ಲೇಖಕಿಯರ ಆಂತರ್ಯದ ಅಭಿವ್ಯಕ್ತಿ:**

ಒಂದು ಹೆಣ್ಣಿನ ಕಷ್ಟವನ್ನು ಇನ್ನೊಂದು ಹೆಣ್ಣು ಅರಿಯಬಲ್ಲಳು. ಒಂದು ಹೆಣ್ಣಿನ ತಳಮಳ, ಆತಂಕ, ನೋವು, ಅಂತರಾಳದ ಅಳಲನ್ನು ಇನ್ನೊಂದು ಹೆಣ್ಣು ಸೂಕ್ಷ್ಮವಾಗಿ ಗ್ರಹಿಸಬಲ್ಲಳು. ತಾನು ಒಂದು ಹೆಣ್ಣಾಗಿ ತನ್ನ ಜೀವನದಲ್ಲಿ ಅನುಭವಿಸಿದ ನೋವು, ಹಿಂಸೆ, ಅವಮಾನಗಳು ಎದುರಿಸಿದ ಸನ್ನಿವೇಶಗಳು ಸಮಾಜದಲ್ಲಿ ಹೆಣ್ಣಿನ ಮೇಲೆ ನಡೆಯುತ್ತಿರುವ ಅಮಾನವೀಯ ಘಟನೆಗಳನ್ನು ತಮ್ಮ ಬರಹದಲ್ಲಿ ವ್ಯಕ್ತಪಡಿಸಿದ್ದಾರೆ.

ವೈದೇಹಿ, ವೀಣಾ ಶಾಂತೇಶ್ವರ, ಪ್ರತಿಭಾ ನಂದಕುಮಾರ, ಎಚ್. ಎಲ್. ಪುಷ್ಪಾ, ಸಾರಾ ಅಬೂಬಕರ್, ಬಾನು ಮುಷ್ತಾಕ್, ಹೀಗೆ ಲೇಖಕಿಯರ ಪಟ್ಟಿ ಸಾಗುತ್ತಲೇ ಹೋಗುತ್ತದೆ. ಸಮಾಜದಲ್ಲಿ ಮಹಿಳೆಯ ಸ್ಥಿತಿಗತಿ ಅವಳ ಮನಸ್ಸಿನ ಭಾವನೆಗಳು ಅವಳು ಎದುರಿಸುತ್ತಿರುವ ಸಮಸ್ಯೆಗಳು, ಎಲ್ಲವನ್ನೂ ಕಥೆ, ಕವನ, ಕಾದಂಬರಿಗಳು, ಆತ್ಮ ಕಥೆಗಳಲ್ಲಿ ಬರೆದಿದ್ದಾರೆ. ಅವಳ ಶೋಷಣೆ ಹೆಣ್ಣಿನ ಆತ್ಮ, ಆತ್ಮ ಬಲ, ತುಡಿತ, ಮಿಡಿತಗಳು ಚರ್ಚೆಗೆ ಒಳಗಾದವು. ಶತ ಶತಮಾನಗಳಿಂದ ಸಂಪ್ರದಾಯದ ಚೌಕಟ್ಟಿನಲ್ಲಿ ಬಂಧಿಯಾಗಿದ್ದ ಸ್ತ್ರೀಯರಿಗೆ, ಸ್ವಾತಂತ್ರ್ಯದ ಗಾಳಿ ಬೀಸಿದೆ. ಹೆಣ್ಣನ್ನು ಸಮಾಜವು ನೋಡುವ ದೃಷ್ಟಿ ಬದಲಾಗಿದೆ. ಹೆಣ್ಣು ಅಬಲೆಯಲ್ಲ ಸಬಲೆ ಎಂಬ ಸತ್ಯ ಗೊತ್ತಾಗಿದೆ. ಕುಟುಂಬಕ್ಕಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟು ಕೊನೆಗೆ ಕಾಲ ಕಸದಂತೆ ನಿರ್ಲಕ್ಷ್ಯಕ್ಕೆ ಒಳಗಾದ ಹೆಣ್ಣಿನ ಸ್ಥಾನ ಬದಲಾಗಿದೆ. ಹೆಣ್ಣಿಗೂ ಆತ್ಮಗೌರವವಿದೆ

ಅವಳಿಗೆ ಅವಳದ್ದೇ ಆದ ಸ್ಥಾನವಿದೆ ಎಂದು ಅರ್ಥಮಾಡಿಕೊಳ್ಳುವ ಸಕಾರಾತ್ಮಕ ಮನಸ್ಥಿತಿ ಬಂದಿದೆ.

**"ನನ್ನ ಗಂಡನಿಗೆ ದೇವರೆಂದು ವನವಾಸಮಾಡಿ**
**ಅಗ್ನಿಗೆ ಧುಮುಕುವ ಸೀತೆಯಲ್ಲ ನಾನು**
**ಗಂಡನ ಪ್ರಾಣಕ್ಕಾಗಿ ಯಮನ ಹಿಂದೆ ನಾಯಿಯಂತೆ**
**ಅಲೆದ ಸಾವಿತ್ರಿಯಲ್ಲ"**

ಎನ್ನುವ ಎಮ್. ಆರ್. ಕಮಲಾರವರು ಗುಲಾಮಳಂತೆ ಬದುಕುವ ಕಾಲ ಮುಗಿದಿದೆ. ಹೆಣ್ಣೆಂದರೆ ಗಂಡಿನ ಸೇವಕಳು, ಹೆಣ್ಣಿನ ಬದುಕು ಗಂಡಿನ ಶ್ರೇಯಸ್ಸಿಗೆ ಮೀಸಲು ಎನ್ನುವ ಕಟ್ಟುಪಾಡು ಹೋಗಿದೆ. ಹೆಣ್ಣು ತನಗಾಗಿ ತಾನು ಬದುಕಬೇಕು ಎನ್ನುವ ಹೊಸ ಕನಸಿನ ಪ್ರಪಂಚ ಇಂದು ಅನಾವರಣಗೊಂಡಿರುವುದನ್ನು ಕಾಣಬಹುದಾಗಿದೆ. ವೈದೇಹಿಯವರ "ಅಡುಗೆ ಮನೆಯ ಹುಡುಗಿ" ಕವಿತೆ ಹೀಗೆ ಹೇಳುತ್ತದೆ.

**"ಎಲ್ಲ ಪ್ರಾಣಿಗೂ ಒಂದು ಹೊಟ್ಟೆ ಇದ್ದ ಹಾಗೆ**
**ಅವಳ ಅಡುಗೆ ಮನೆ**
**ಯಾರ ಸಿದ್ಧಾಂತ ಪಾಕವೋ**
**/ಕಿಟಕಿ ಬಾಗಿಲಗಳಿಲ್ಲ**
**ಹೊಗೆ ನಳಿಗೆಯೂ ಇಲ್ಲ**
**ಕೊನೆಗೆ ಕಿರು ಕಿಂಡಿಯಾದರೂ.....**
**ಹಂಬಲಿಸುತ್ತಾಳೆ."**

ಈ ಕವಿತೆಯಲ್ಲಿ ಹೆಣ್ಣಿನ ಸ್ಥಾನ ಅಡುಗೆಮನೆಯೆನ್ನುವ ಅನಾದಿಕಾಲದ ಅಲಿಖಿತ ಶಾಸನದ ಕ್ರೌರ್ಯತೆಯನ್ನು ವಿರೋಧಿಸುತ್ತದೆ. ಸಂಪ್ರದಾಯ ಕಟ್ಟುಪಾಡುಗಳ ಹೆಸರಿನಲ್ಲಿ ಹೆಣ್ಣನ್ನು ಅಡುಗೆಮನೆಯಲ್ಲಿ ಕೂಡಿ ಹಾಕಿ ಅವಳಿಗೆ ಕೇವಲ ಸಂಸಾರದ ಹೊರೆಯನ್ನು ಹೊರಿಸಿ ಕತ್ತಲಿನ ಕೂಪದಲ್ಲಿ ಬಂಧಿಯಾಗಿಸಿ ಹೊರ ಪ್ರಪಂಚದ ಅರಿವು ಇಲ್ಲದಂತೆ ಶೋಷಣೆ ಮಾಡಿದ ಪುರುಷ ಪ್ರಧಾನ ಸಮಾಜದ ಅನ್ಯಾಯದ ಬಗ್ಗೆ ಧ್ವನಿ ಎತ್ತುತ್ತದೆ. ಆದರೆ ಇಂದು ಹೆಣ್ಣು ತೊಟ್ಟಿಲು ತೂಗುವ ಕೈ ತೊಟ್ಟಿಲು ತೂಗುತ್ತಲೇ ಸಮಾಜವನ್ನು ಆಳಬಲ್ಲದು ಎಂದು ತೋರಿಸಿಕೊಟ್ಟಿರುವುದು ಹೆಣ್ಣು ಮಕ್ಕಳ ಆತ್ಮಸ್ಥೈರ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ವೈದೇಹಿಯವರ "ನೋಡಬಾರದು ಚೀಲದೊಳಗನು" ಕವಿತೆಯನ್ನು ಗಮನಿಸಿದರೆ,

**ವ್ಯಾನಿಟಿ ಬ್ಯಾಗ್‌ನಲ್ಲಿ ಕೈ ಹಾಕಿ ನೋಡುವುದು**
**ಎಂದಿಗೂ ಉಚಿತವಲ್ಲ ಪುರುಷರೇ**
**ವ್ಯಾನಿಟಿ ಹೆಸರಲ್ಲಿ ಏನೆಲ್ಲ ಇರಬಹುದು**
**ಬಯಲು ಮಾಡುವೆ?**

ಇದು ಸಮಾಜದಲ್ಲಿ ಸ್ತ್ರೀಯರಿಗೂ ಪುರುಷರಷ್ಟೇ ಸ್ವತಂತ್ರವಿದೆ ಎಂದು ಸಾರುವ ಕವಿತೆಯಾಗಿದೆ. ಮಹಿಳೆಯರಿಗೆ ಅವರದ್ದೇ ಆದ ಒಂದು ಲೋಕವಿರುತ್ತದೆ. ಅದನ್ನು ಯಾರು ಪ್ರಶ್ನಿಸದೆ, ಅದರಲ್ಲಿ ಯಾರು ತಮ್ಮ ಅಧಿಕಾರ ಚಲಾಯಿಸಬಾರದು. ಹೆಣ್ಣು ಹೊರಗೆ ಹೇಳಲಾಗದ ಅದೆಷ್ಟೋ ಬಚ್ಚಿಟ್ಟ ಭಾವನೆಗಳಿರುತ್ತವೆ. ಅದನ್ನೆಲ್ಲ ವ್ಯಾನಿಟಿ ಬ್ಯಾಗ್ ಎನ್ನುವ ಪ್ರತಿಮೆಯ ಮೂಲಕ ಲೇಖಕಿ ಅಭಿವ್ಯಕ್ತಪಡಿಸಿದ್ದಾರೆ.

**"ಒಣಗಿರುವ ಎಲೆ, ಹೂಗಳಿರಬಹುದು**
**ಇರಬಹುದು ಯಾರದೋ ಮನೆಯ ದಾರಿ ನಕ್ಷೆ**
**ಮರದ ಮುಚ್ಚಿಗೆಯಡಿಯ ಕೆಂಪು ನೆಲದ ತಂಪು**

**ತೇದಷ್ಟು ಸವೆಯದ ನೆನಪು**
**ಟೆಕ್ಕಿ ಎಲೆ ಪರಿಮಳ**
**ಮರಿ ಇಡುವ ನವಿಲುಗರಿ**
**ಕಾಪಿಟ್ಟಿರಬಹುದು ಪುಟ್ಟ ದಿನಗಳನ್ನು**
**ಇರಬಹುದು ಎಲ್ಲಿನದೋ ಮರಳು ಮಣ್ಣು."**

ಇದೊಂದು ಹೆಣ್ಣಿನ ಮನಸ್ಸಿನ ಒಳಜಗತ್ತಿನ ಆಸೆ, ಕನಸು, ಹವ್ಯಾಸಗಳ ಬದುಕು, ಭಾವನೆಗಳ ಕೋಶವಾಗಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಸ್ವಂತಿಕೆ ಎನ್ನುವುದು ದೂರದ ಮಾತಾಗಿದೆ. ಆದರೆ, ಅವಳ ಅಂತರಂಗದ ಅಂಗಳವನ್ನು ಇಣುಕಿ ನೋಡುವುದು ಪುರುಷರಿಗೆ ಸಾಧ್ಯವಿಲ್ಲ ಹಾಗೂ ಅದು ಉಚಿತವಲ್ಲ ಎನ್ನುತ್ತಾರೆ ಲೇಖಕಿ. ಮಹಿಳೆಯ ಮನಸ್ಸನ್ನು ಪುರುಷರು ಅವರದ್ದೇ ಆದ ಮಾನದಂಡಗಳ ಮೂಲಕ ಅಳೆಯುವುದು ಒಂದು ವ್ಯರ್ಥ ಪ್ರಯತ್ನ ಎನ್ನುತ್ತಾರೆ. ಸ್ತ್ರೀಯರಿಗೆ ಪ್ರತಿಯೊಂದು ವಸ್ತು ವಿಷಯವು ಅದ್ವಿತೀಯವಾಗಿರುತ್ತದೆ. ಅವರದ್ದೇ ಆದ ಭಾವನಾ ಲೋಕದಲ್ಲಿ ಪ್ರತಿ ವಸ್ತುವಿನ ಜೊತೆಗೆ ಸಂಬಂಧ ಇರುತ್ತದೆ. ಒಣಗಿದ ಎಲೆ ಹೂವುಗಳು ಯಾವುದೋ ನೆನಪನ್ನು ತರಬಹುದು, ಮರಿ ಇಡುವ ನವಿಲುಗರಿ ಬಾಲ್ಯದ ದಿನಗಳ ಮೆಲುಕು ಹಾಕಿಸಬಹುದು, ಯಾರದೋ ಮನೆಯ ದಾರಿಯ ನಕ್ಷೆ, ಎಂದೋ ಬರೆದ ಕವನಗಳು ಹೀಗೆ ಮಹಿಳೆಯ ಮನಸ್ಸಿನ ಚೀಲದಲ್ಲಿ ಪ್ರತಿ ವಸ್ತುವು ಒಂದೊಂದು ಸಿಹಿ, ಕಹಿ ಸ್ಮೃತಿಯನ್ನು ಹೊರ ಹಾಕುತ್ತವೆ. ಹಾಗಾಗಿ ನೋಡಬಾರದು ಚೀಲದೊಳಗನು ಎಂದು ಪ್ರತಿ ಮಹಿಳೆಗೂ ಇರುವ ಸ್ವಾತಂತ್ರ, ಸ್ವಂತಿಕೆಯನ್ನು ಈ ಕವಿತೆ ಸಾರುತ್ತದೆ.

ಡಾ. ಕಮಲಾ ಹಂಪನಾರವರ ಒಂದು ಕವಿತೆ ಹೀಗಿದೆ.

**"ಅಕ್ಷತೆ ಸುರಿದ ಕೈಯಲ್ಲಿ ಸೀಮೆ ಎಣ್ಣೆ ಸುರಿಯುವರಯ್ಯ**
**ಅರಿಶಿನ ಹಚ್ಚಿದ ಕೈಯಲ್ಲಿ ಬೆಂಕಿ ಹಚ್ಚಿ ಸುಡುವರಯ್ಯ**
**ವಧುಮಾಡಿ ಮನೆ ತುಂಬಿಸಿಕೊಂಡವರೇ**
**ಹೆಣ ಮಾಡಿ ಆಚೆ ಸಾಗಿಸುವರಯ್ಯ".**

ಈ ಕವಿತೆಯನ್ನು ಗಮನಿಸಿದಾಗ ಹೇಗೆ ಸಮಾಜದಲ್ಲಿ ಹೆಣ್ಣನ್ನು ವರದಕ್ಷಣೆ ಎಂಬ ಭೂತಕ್ಕೆ ಬಲಿಕೊಡಲಾಗುತ್ತದೆ ಎಂಬ ವಿಕೃತ ಕ್ರೌರ್ಯವನ್ನು ಈ ಒಂದು ಕವಿತೆಯಲ್ಲಿ ನೋಡಬಹುದಾಗಿದೆ.

**"ಪ್ರೀತಿಯಿಂದ ಕಟ್ಟಿದ ಅವಳ ನಾಗರಿಕತೆಗಳ ಮೇಲೆ**
**ಕಾಣುತ್ತಿದೆ ನಿಮ್ಮದೇ ಕ್ರೂರ ಮುದ್ರೆ**
**ಅವಳೇ ಕಟ್ಟಿದ ಸಂಸ್ಕೃತಿಗಳ ಮೇಲೆ**
**ಇರಲಿ ಬಿಡಿ ಅವಳದೇ ಮುದ್ರೆ**
**ನಿಲ್ಲಿಸಲಿ ಬಿಡಿ ಅವಳದೇ ಸೌಧ**
**ತೋರಿಸಲಿ ಬಿಡಿ ಲೋಕಕ್ಕೆ ಹೊಸ ಸೂರ್ಯೋದಯ"**

ಕೆ. ಷರೀಫಾರವರ ಈ ಕವಿತೆಯನ್ನು ಓದಿದಾಗ ಸಮಾಜದಲ್ಲಿ ಹೊಸ ಪರ್ವದ ಗಾಳಿ ಬೀಸಿ ಹೆಣ್ಣುಮಕ್ಕಳು ಲೋಕಕ್ಕೆ ಬೆಳಕು ನೀಡುವಂತಾಗಬೇಕು. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ, ಹೆಣ್ಣಿನ ಉದ್ಧಾರವೇ ಸಮಾಜದ ಉದ್ಧಾರ. ಹಾಗಾಗಿ, ಹೆಣ್ಣು ಮಕ್ಕಳು ಸ್ವತಃ ಆತ್ಮಸ್ಥೈರ್ಯದಿಂದ ಸಾಧನೆಯನ್ನು ಮಾಡಿ ಎಲ್ಲರಿಗೂ ಸ್ಫೂರ್ತಿಯಾಗಬೇಕು ತಮಗೊದಗುವ ಸವಾಲುಗಳನ್ನು ಎದುರಿಸಿ ಸಾಧನೆಯ ಶಿಖರ ಏರಬೇಕು ಎನ್ನುವುದು ಕವಯಿತ್ರಿಯವರ ಅಭಿಪ್ರಾಯವಾಗಿದೆ.

ಪ್ರತಿಯೊಂದು ಧರ್ಮ ಜಾತಿ ಎಲ್ಲದರಲ್ಲಿಯೂ ಅದರದ್ದೇ ಸಾಂಪ್ರದಾಯಿಕ ಉಸಿರುಗಟ್ಟುವ ವಾತಾವರಣದಲ್ಲಿ ಮಹಿಳೆಯರನ್ನು ಬಂಧಿಸಿದ್ದರು. ಆದರೆ ಇಂದು ಮಹಿಳೆ ಹೊಸ ಗಾಳಿ, ಬೆಳಕಿನ ಸಮಾಜಕ್ಕೆ ತೆರೆದುಕೊಳ್ಳುತ್ತಿರುವುದು ಸಂತಸಕರ ವಿಷಯ. ಈ ನಿಟ್ಟಿನಲ್ಲಿ ಮುಸ್ಲಿಂ ಮಹಿಳೆಯರ ನೋವಿನ ಧ್ವನಿಯಾಗಿ ಬರಹಗಳಲ್ಲಿ ನೊಂದ ಮಹಿಳೆಯರ ಬದುಕಿನ ಚಿತ್ರಣವನ್ನು ಚಿತ್ರಿಸಿ ಧರ್ಮದ ಹೆಸರಿನಲ್ಲಿ ಹೆಣ್ಣು ಹೇಗೆ ಶೋಷಿತಳಾಗುತ್ತಾಳೆ. ಇದರಿಂದ ಕುಟುಂಬದಲ್ಲಿ ಉಂಟಾಗುವ ಒಡಕುಗಳ ಬಗ್ಗೆ ತಿಳಿಸುವ ಪ್ರಯತ್ನ ಮಾಡಿದವರು ಸಾರಾ ಅಬೂಬಕರ್‌ರವರು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀಯನ್ನು ಕಲ್ಲಿನ ರೀತಿ ನಡೆಸಿಕೊಂಡು ಅವಳಿಗೆ ಒಂದು ಮನಸ್ಸಿದೆ ಎಂಬುದನ್ನು ಮರೆತು ವರ್ತಿಸುತ್ತಾರೆ. ಚಂದ್ರಗಿರಿಯ ತೀರದಲ್ಲಿ ಮತ್ತು ಸಹನಾ ಎರಡು ಕಾದಂಬರಿಗಳಲ್ಲಿ ಸಾರಾ ಅಬೂಬಕರ್‌ರವರು ಸ್ತ್ರೀ ಸಂವೇದನೆಯನ್ನು ಅಭಿವ್ಯಕ್ತಿಸಿ ಮಹಿಳೆಯರ ಪರ ಧ್ವನಿಯಾಗಿದ್ದಾರೆ. ಪುರುಷ ಪ್ರಧಾನ ಸಮಾಜದಲ್ಲಿ ಪುರುಷರು ನಿರ್ಮಿಸಿದ ಕೆಲವು ನೀತಿ, ನಿಯಮಗಳ ಅಡಿಯಲ್ಲಿ ಪುರಾಣ ಚರಿತ್ರೆಯಲ್ಲಿನ ಆದರ್ಶ ಸ್ತ್ರೀ ಪಾತ್ರಗಳಾಗಿದ್ದ ಸೀತೆ, ಸಾವಿತ್ರಿ, ದ್ರೌಪದಿ, ಶಕುಂತಲೆ, ಅಹಲ್ಯೆ, ಊರ್ಮಿಳೆ, ಅಮೃತಮತಿ, ಮುಂತಾದ ಸ್ತ್ರೀ ಪಾತ್ರಗಳನ್ನು ಹೊಸ ದೃಷ್ಟಿಕೋನದಿಂದ ನೋಡುವ, ಅವರನ್ನು ವಿಭಿನ್ನ ನೆಲೆಗಟ್ಟಿನಲ್ಲಿ ನಿಲ್ಲಿಸಿ ಪ್ರಶ್ನಿಸುವ, ಅಸಹಾಯಕತೆ ಪುರುಷರ ದೌರ್ಜನ್ಯ ಇವುಗಳನ್ನು ವಿಡಂಬಿಸುವ ವಿರೋಧಿಸುವ ಮೂಲಕ ಪೌರಾಣಿಕ ಪಾತ್ರಗಳಿಗೆ ಹೊಸ ಜೀವ ತುಂಬಿ ನಾವಿನ್ಯತೆ ನೀಡಿದ್ದಾರೆ. ಇಂತಹ ಪ್ರಯೋಗಗಳಿಗೆ ಕೆಲವು ಉದಾಹರಣೆಗಳು ಹೀಗಿವೆ– ದ್ರೌಪದಿಯ ಸ್ವಗತ – ಸರಸ್ವತಿಗೌಡ, ಸೀತೆಯ ಸ್ವಗತ–ಪ್ರತಿಭಾ ನಂದಕುಮಾರ, ಮಹಾಶ್ವೇತೆಯ ಸ್ವಗತ–ಸಾ. ಉಷಾ, ಸತ್ತವನ ಸ್ವಗತ–ಸುಜಾತಾ ಕುಮುಟಾ, ಅಕ್ಕನ ಸ್ವಗತ–ಕಮಲಾ ಹೆಮ್ಮಿಗೆ, ಅಮೃತಮತಿಯ ಸ್ವಗತ–ಎಚ್.ಎಲ್. ಪುಷ್ಪಾ, ಅಹಲ್ಯ ಸ್ವಗತ–ಸುಕನ್ಯ ಮಾರುತಿ, ಕೈಕೆಯ ಸ್ವಗತ–ಸರಸ್ವತಿ ಗಂಗೊಳ್ಳಿ.

ಎಚ್. ಎಲ್. ಪುಷ್ಪರವರ ಅಮೃತಮತಿಯ ಸ್ವಗತ ಕವಿತೆಯನ್ನು ಗಮನಿಸಿದರೆ:

**“ಸವಿಯಿದೆ ನೋಡು**
**ಒರಟು ಚಾಟಿಯ ಚುಂಬನದಲ್ಲಿ**
**ನವಿರಿದೆ ನೋಡು, ನಾದವಿದೆ ನೋಡು**
**ಒರಟು ಬೆರಳುಗಳ ಕಂಪನದ**
**ಏನಿದು ಮಿಡಿತ, ಮುಳ್ಳುಗಳ ಮುತ್ತಿನಲಿ**
**ಅದಕೆ ನೋಡು ದೊರೆ**
**ನಿನ್ನ ಚಂದನ, ಗಂಧ ಸುವಾಸಿತ ತೆಕ್ಕೆ**
**/ಬಿಟ್ಟು ಈ ಕಾಡ ಪೊದೆಯ ಕರೆಗೆ**
**ಹಾಡಾಗಿ ಹಾಡಿದ್ದು”**

ಪವಿತ್ರತೆ, ಪತಿವ್ರತೆ ಎಂಬ ಬೇಲಿಗಳನ್ನು ದಾಟಿ ಸ್ತ್ರೀ ತನ್ನ ಆಯ್ಕೆಯನ್ನು ತೋರುವ ಪುರಾಣದ ಪಾತ್ರವಾದ ಅಮೃತಮತಿ ಸಂಪ್ರದಾಯವನ್ನು ಮೀರಿ ಇಲ್ಲಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾಳೆ. ಬಾಹ್ಯ ಸಿರಿ, ಸಂಪತ್ತು ಎಲ್ಲವನ್ನು ಮೀರಿದ್ದು ಮನಸ್ಸಿನ ಬಯಕೆ, ಸಂತೋಷ. ಅದಕ್ಕಾಗಿ ಅಮೃತಮತಿ ಅರಮನೆಯ ವೈಭವವನ್ನು ಮರೆತು ತನ್ನ ಆತ್ಮಕ್ಕೆ ಸುಖ ನೀಡುವ ಮಾವುತ ಬದಗನಲ್ಲಿ ಒಂದಾಗುತ್ತಾಳೆ. ಅರಸನ ಶ್ರೀಮಂತಿಕೆ, ಮೆತ್ತನೆಯ ಹಾಸಿಗೆ, ಸುಗಂಧ ದ್ರವ್ಯಗಳು ನೀಡದ ಸುಖವನ್ನು ಕಾಡಿನ ಪೊದೆಯ ಹೂವೊಂದು ನೀಡಿತು ಎನ್ನುತ್ತಾಳೆ. ಪಾಪ ಪುಣ್ಯಗಳನ್ನು ಎಣಿಸದೆ ತನಗೆ ಸರಿ ಎನಿಸಿದ್ದನ್ನು ಮಾಡುವ ಸ್ವತಂತ್ರ ತೋರುತ್ತಾಳೆ. ಮುಂದೆಯೂ ನನ್ನಂತಹ ಅಮೃತಮತಿಯರು ಹುಟ್ಟುತ್ತಲೇ ಇರುತ್ತಾರೆ ಎನ್ನುತ್ತಾಳೆ. ಇಲ್ಲಿ

ಲೇಖಕಿ ಅಮೃತಮತಿಯ ಅಸ್ತಿತ್ವದ ಸಂಘರ್ಷ, ಕಾಮದ ಹಸಿವು ಮತ್ತು ಸಂವೇದನೆಗಳ ಕಡೆಗೆ ಗಮನ ಹರಿಸುತ್ತಾರೆ. ಈ ಕವನ ಅಮೃತಮತಿಯ ಆಂತರಿಕ ಧ್ವನಿಯಾಗಿ, ಅವಳ ತೃಪ್ತಿಯಿಲ್ಲದ ಬದುಕು, ಪ್ರೇಮ ಕಾಮನೆಗಳ ನಡುವಿನ ಗೊಂದಲ ಮತ್ತು ಸಮಾಜದ ನಿರ್ಬಂಧಗಳ ವಿರುದ್ಧದ ಹೋರಾಟವನ್ನು ವಿವರಿಸುತ್ತದೆ. ಇಲ್ಲಿ ಲೇಖಕಿ ಸ್ತ್ರೀ ಹೇಗೆ ತನ್ನ ಆಯ್ಕೆಯ ಸ್ವಾತಂತ್ರ್ಯದೆಡೆಗೆ ಸಾಗುತ್ತಿದ್ದಾಳೆ ಎನ್ನುವ ಚಿತ್ರಣ ನೀಡಿದ್ದಾರೆ. ಹೀಗೆ ಸ್ವಗತಗಳ ಮೂಲಕ ಅನೇಕ ಮಹಿಳೆಯರು ಪುರಾಣದಲ್ಲಿ ತಮ್ಮ ಅಸ್ಮಿತೆಯನ್ನು ಕಳೆದುಕೊಂಡು ಗೌಣವಾಗಿದ್ದ ಪಾತ್ರಗಳಿಗೆ ಪುರುಷರು ನಿರ್ಮಿಸಿದ್ದ ಚೌಕಟ್ಟಿನಲ್ಲಿ ತಮ್ಮ ವೇದನೆಯನ್ನು ಅನುಭವಿಸುತ್ತಿದ್ದ ಪಾತ್ರಗಳಿಗೆ ಜೀವ ತುಂಬಿ ಅವರು ಅನುಭವಿಸಿದ ನೋವು, ಅವಮಾನಗಳನ್ನು ಅವರದೇ ಸ್ಥಾನದಲ್ಲಿ ನಿಂತು ಅಭಿವ್ಯಕ್ತಿಸುವ ಮೂಲಕ ಅಂದು, ಆ ಪಾತ್ರಗಳು ಮಾಡದಿದ್ದ ಕೆಲಸಗಳನ್ನು ತಾವೇ ಮಾಡಿ ಅಂದಿನ ಆ ಪುರಾಣದ ಪಾತ್ರಗಳಲ್ಲಿದ್ದ ಸ್ತ್ರೀಯರ ನೋವನ್ನು ಇಂದು ಪ್ರಸ್ತುತ ಸಮಾಜದಲ್ಲಿಯೂ, ನಮ್ಮ ಸುತ್ತಮುತ್ತಲೂ ಅನುಭವಿಸುತ್ತಿರುವ ಹೆಣ್ಣುಮಕ್ಕಳಿಗೆ ಧೈರ್ಯವನ್ನು ನೀಡುವ ಕಾರ್ಯವನ್ನು ಮಾಡುತ್ತಿರುವ ಮಹಿಳಾ ಲೇಖಕಿಯರ ಈ ಪ್ರಯತ್ನ ಶ್ಲಾಘನೀಯವಾಗಿದೆ.

ಇಡೀ ಸಂಸಾರದ ಜವಾಬ್ದಾರಿಯನ್ನೇ ಹೊತ್ತು ನಿಭಾಯಿಸುವಂತಹ ಹೆಣ್ಣನ್ನು ಕನಿಷ್ಟವಾಗಿಯೇ ನೋಡಿರುವುದು ಒಂದು ವಿಷಾದನೀಯ ಸಂಗತಿಯಾಗಿದೆ. ಸಂಸಾರದಲ್ಲಿ ಸಮಾಜದಲ್ಲಿ ನೌಕರಿಯಲ್ಲಿ ಮಹಿಳೆಯರು ತಾವು ಕಂಡು, ಉಂಡಂತಹ ನೋವು, ನಲಿವು, ಸಂತಸ, ಅವಮಾನ, ಸಮಸ್ಯೆಗಳನ್ನು ತಮ್ಮ ಆತ್ಮ ಕಥೆಗಳಲ್ಲಿ ವ್ಯಕ್ತಪಡಿಸಿರುವುದನ್ನು ನಾವು ಕಾಣಬಹುದಾಗಿದೆ. ಸಂಸಾರದ ಗುಟ್ಟು ವ್ಯಾಧಿ ರಟ್ಟು ಎನ್ನುವ ಮಾತಿನಿಂದ ಹೊರಬಂದು ಹೆಣ್ಣು ತನ್ನ ಜೀವನದ ಬಗ್ಗೆ ಬರಹದ ರೂಪದಲ್ಲಿ ವ್ಯಕ್ತಪಡಿಸುವ ಧೈರ್ಯವನ್ನು ತೋರಿರುವುದು ಒಂದು ಸಂತಸಕರ ವಿಷಯ. ಈ ನಿಟ್ಟಿನಲ್ಲಿ ಹಲವಾರು ಮಹಿಳಾ ಲೇಖಕಿಯರು ತಮ್ಮ ಆತ್ಮ ಕಥನವನ್ನು ಬರೆದುಕೊಂಡಿದ್ದಾರೆ. ಅದರಲ್ಲಿ ಅವರು ಅನುಭವಿಸಿದಂತಹ ಸಮಸ್ಯೆಗಳನ್ನು ಹಂಚಿಕೊಂಡಿದ್ದಾರೆ. ತಮಗೆ ಎದುರಾದ ಸಮಸ್ಯೆಗಳನ್ನು ಯಾವ ರೀತಿ ಅವರು ತಮ್ಮ ಜೀವನದಲ್ಲಿ ಎದುರಿಸಿ, ಮುಂದೆ ಬಂದರು ಎನ್ನುವುದನ್ನು ತಿಳಿಸಿ ಇತರ ಹೆಣ್ಣುಮಕ್ಕಳಿಗೂ ಧೈರ್ಯ ತುಂಬಿದ್ದಾರೆ. ಪ್ರಮುಖವಾದವುಗಳು ಹೀಗಿವೆ: ಪ್ರತಿಭಾ ನಂದಕುಮಾರ್‌ರವರ ಅನುದಿನದ ಅಂತರಗಂಗೆ, ಬಿ. ಸರಸ್ವತಿಯವರ ಈಗೇನ ಮಾಡಿರಿ, ಅನುಪಮಾ ನಿರಂಜನರವರ ನೆನಪು ಸಿಹಿ ಕಹಿ ಮತ್ತು ಬರಹಗಾರ್ತಿಯ ಬದುಕು, ಶಾರದಾ ಹೆಮ್ಮಿಗೆರವರ ಬದುಕು ಕೊಟ್ಟಿದ್ದು, ಕಲಿಸಿದ್ದು, ವೀಣಾಧರಿಯವರ ಎಚ್. ಐ. ವಿ. ಮತ್ತು ನಾನು, ಯಶವಂತಿ ಸುವರ್ಣಾರವರ ಪಶ್ಚಿಮಕ್ಕೆ ವಾಲಿದ ಸೂರ್ಯ, ಶೈಲಜಾ ನಾಗರಘಟ್ಟರವರ ಕಿಚ್ಚಿಲ್ಲದ ಬೇಗೆ, ಪರಮೇಶ್ವರಿ ಲೊಕೇಶ್ವರವರ ಬಹುಧಾನ್ಯದಿಂದ ಬಹುಧಾನ್ಯಕ್ಕೆ, ಶಶಿಕಲಾ ವೀರಯ್ಯ ಸ್ವಾಮಿಯವರ ಅಪ್ಪ ಮತ್ತು ಮಣ್ಣು, ಸಾರಾ ಅಬೂಬಕರ್‌ರವರ ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು. ಇವೆಲ್ಲವೂ ಕೂಡಾ ಕನ್ನಡದಲ್ಲಿ ಬಂದಂತಹ ಮಹಿಳಾ ಆತ್ಮ ಕಥೆಗಳಾಗಿವೆ. ಇವೆಲ್ಲಾ ಮಹಿಳೆಯರ ವ್ಯಕ್ತಿತ್ವದ ಅಸ್ಮಿತೆಗಳಾಗಿ ಇಂದು ಎಲ್ಲಾ ಮಹಿಳೆಯರಿಗೂ ಕೂಡಾ ದಾರಿ ದೀಪಗಳಾಗಿವೆ.

**ಉಪಸಂಹಾರ:** ಹೆಣ್ಣು ಹುಟ್ಟುವುದೇ ಒಂದು ಸಮಸ್ಯೆ ಎಂದು ತಿಳಿದಿದ್ದ ಸಮಾಜದಲ್ಲಿ ಒಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬಳು ಹೆಣ್ಣು ಇದ್ದೇ ಇರುತ್ತಾಳೆ ಎನ್ನುವ ಮಟ್ಟಕ್ಕೆ ಇಂದು ಹೆಣ್ಣು ಮಕ್ಕಳು ಬಂದು ನಿಂತಿದ್ದಾರೆ. ಅನಾದಿಕಾಲದಿಂದಲೂ ಅದೆಷ್ಟೊ ಅವಮಾನ, ಶೋಷಣೆ ಸಹಿಸಿದ್ದ ಮಹಿಳೆಯರು ಇಂದು ಹೊಸಿಲು ದಾಟಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ

ಸಾಧನೆಗಳನ್ನು ಮಾಡಿ ತಮ್ಮ ಛಾಪನ್ನು ಎಲ್ಲೆಡೆ ರಾರಾಜಿಸುವಂತೆ ಮಾಡಿದ್ದಾರೆ. ಆದರೂ ಇನ್ನೂ ಕೂಡಾ ಶೋಷಣೆಗಳಿಗೆ ಒಳಗಾಗುವ ಅದೆಷ್ಟೋ ಸ್ತ್ರೀಯರಿಗೆ ನ್ಯಾಯ ದೊರಕಬೇಕಾಗಿದೆ. ಕತ್ತಲೆಯ ಕೋಣೆಯಲ್ಲಿ ಬಂಧಿಯಾಗಿರುವ ಅದೆಷ್ಟೋ ಮಹಿಳೆಯರು ಬೆಳಕಿನ ಅಂಗಳಕ್ಕೆ ಕಾಲಿಡಬೇಕಾಗಿದೆ. ಗ್ರಾಮೀಣ ಪ್ರದೇಶದ ಮಹಿಳೆಯರ ಸಮಸ್ಯೆಗಳು ಹಾಗೂ ನಗರ ಪ್ರದೇಶದ ಮಹಿಳೆಯರ ಸಮಸ್ಯೆಗಳು ವಿಭಿನ್ನ ರೀತಿಯಾಗಿವೆ. ಅಕ್ಷರಸ್ಥ ಮತ್ತು ಅನಕ್ಷರಸ್ಥ ಮಹಿಳೆಯರ ಸಮಸ್ಯೆಗಳ ನಡುವೆಯೂ ವ್ಯತ್ಯಾಸವಿದೆ. ಮಹಿಳಾ ಸಂವೇದನೆ ಎನ್ನುವುದು ಸಮಾಜದ ಸಂವೇದನೆಯಾಗಿದೆ. ಏಕೆಂದರೆ ಮಹಿಳೆಯರನ್ನು ಹೊರತುಪಡಿಸಿದ ಸಮಾಜವನ್ನು ಊಹಿಸಿಕೊಳ್ಳುವುದೂ ಸಾಧ್ಯವಿಲ್ಲ. ಎಲ್ಲಿ ಸ್ತ್ರೀಯರಿಗೆ ಗೌರವವಿರುತ್ತದೆಯೋ ಆ ಸಮಾಜದಲ್ಲಿ ಉತ್ತಮ ಮೌಲ್ಯಗಳನ್ನು, ಉತ್ತಮ ನೈತಿಕತೆಯನ್ನು ಕಾಣಬಹುದಾಗಿದೆ. ಮಹಿಳೆಯರಿಗೆ ಗೌರವ, ಸ್ವಾತಂತ್ರ್ಯ ಹಾಗೂ ರಕ್ಷಣೆ ಇಲ್ಲದ ಯಾವುದೇ ದೇಶ ಇನ್ನು ಯಾವುದೇ ಕ್ಷೇತ್ರದಲ್ಲಿ ಎಷ್ಟೇ ಅಭಿವೃದ್ಧಿ ಹೊಂದಿದ್ದರೂ ಕೂಡಾ ಅದು ಅಪೂರ್ಣವಾಗಿಯೇ ಉಳಿಯುತ್ತದೆ ಎನ್ನುವ ಮಾತು ಸತ್ಯವಾಗಿದೆ. ಈ ನಿಟ್ಟಿನಲ್ಲಿ ಮಹಿಳೆಯರ ಬದುಕಿನ ಮೇಲೆ ಬರಹಗಳ ರೂಪದಲ್ಲಿ ಬೆಳಕು ಚೆಲ್ಲುವ ಮಹಿಳಾ ಸಂವೇದನೆಯನ್ನು ಅಭಿವ್ಯಕ್ತಿಪಡಿಸುವ ಇನ್ನು ಹೆಚ್ಚು ಹೆಚ್ಚು ಕೃತಿಗಳು ಕನ್ನಡ ಸಾಹಿತ್ಯದಲ್ಲಿ ಮೂಡಿಬರಲಿ ಎನ್ನುವುದೇ ಈ ಲೇಖನದ ಆಶಯವಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಮಲ್ಲಿಕಾ ಘಂಟಿ (ಸಂ), (2020), ಸ್ತ್ರೀವಾದಿ ಚಿಂತನೆ (ಮಹಿಳಾ ಸಾಹಿತ್ಯ ಸಂಪುಟ), ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
2. ಬಲಭೀಮ, (2020), ಮಹಿಳಾ ಸಂವೇದನೆ, ಹಾಸನ: ಲಿಖಿತ ಪ್ರಕಾಶನ.
3. ಅನಸೂಯ ಕಾಂಬಳೆ, (2023), ಮಹಿಳೆ ಮತ್ತು ಖಾಸಗಿತನ (ಸ್ತ್ರೀವಾದದ ವಿಸ್ತರಣಾ ನೆಲೆಗಳು), ಸುರತ್ಕಲ್: ಸಂಗಾತ ಪುಸ್ತಕ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.